ದಿನಾಂಕ:24.06.2016ರ ಶುಕ್ರವಾರದಂದು ಅಪರಾಹ್ನ 2.30ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ. ಸುರಯ್ಯಾ ಅಬ್ರಾರ್‌ರವರ ಅಧ್ಯಕ್ಷತೆಯಲ್ಲಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡಾವಳಿ.

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಶ್ರೀಮತಿ ಸುರಯ್ಯಾ ಅಬ್ರಾರ್‌ರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 2. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. | 2. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 3. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 3. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 4. | ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 4. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 5. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 5. | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು |
| 6. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 6. | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 7. | ಕಾರ್ಯಪಾಲಕ ಅಭಿಯಂತರರುರವರ ಸದಸ್ಯರು<br>ಪರವಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ<br>ಮಂಡಳಿ, ಮೈಸೂರು | 7. | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |
| 8. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | | |
| 9. | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,<br>ಮಡಿಕೇರಿ | | |
| 10. | ಶ್ರೀ ರಾಜಶೇಖರ್ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು, ವಿಧಾನ ಸಭಾ ಸದಸ್ಯರುಗಳಾದ ಮಾನ್ಯ ಶ್ರೀ ಕೆ.ಜಿ.ಬೋಪಯ್ಯನವರು ಮತ್ತು ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರುಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳು, ಪತ್ರಿಕಾ ಮತ್ತು ದೃಶ್ಯ ಮಾಧ್ಯಮದವರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ:08.03.2016ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭಾ ನಡಾವಳಿಯನ್ನು ಸಭೆಯಲ್ಲಿ ಓದಲಾಯಿತು ಈ ಕೆಳಕಂಡ ವಿಷಯಗಳನ್ನು ಮತ್ತೊಮ್ಮೆ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

**ವಿಷಯಸಂಖ್ಯೆ11:–**ಶ್ರೀ ಕೆ.ಎಂ.ಲಕ್ಷ್ಮೀನಾರಾಯಣ ಮತ್ತು ಶ್ರೀಮತಿ ಜಿ.ಎಲ್.ಶಾಂತಿರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಕೇಶವ ಪ್ರಸಾದ್ ಮುಳಿಯ, ಮಡಿಕೇರಿರವರು ಕೆ.ಬಾಡಗ ಗ್ರಾಮ ಸರ್ವೆ ನಂಬರ್ 102 ರಲ್ಲಿ 0.39ಎಕರೆ 104/1 ರಲ್ಲಿ 2.76ಎಕರೆ ಒಟ್ಟು 3.15ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿದ್ದ ಪ್ರಸ್ತಾವನೆಗೆ ದಿನಾಂಕ:08.03.2016ರಂದು ನಡೆದ ಸಭೆಯಲ್ಲಿ ಮಾನ್ಯ ಜಿಲ್ಲಾಧಿಕಾರಿವರಿಂದ ಮಾರ್ಪಡಿತ ಭೂ ಪರಿವರ್ತನೆ ಆದೇಶವನ್ನು ಸಲ್ಲಿಸಿದಲ್ಲಿ ಮುಂದಿನ ಸಭೆಯ ಗಮನಕ್ಕೆ ತಂದು ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಗಿತ್ತು.

ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರು ಸಭೆಯಲ್ಲಿ ವಿವರಣೆ ನೀಡುತ್ತಾ, ಸದರಿಯವರು ದಿನಾಂಕ:21.06.2016ರಂದು ಅರ್ಜಿ ಸಲ್ಲಿಸಿ, ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 102 ಮತ್ತು 104/1ರಲ್ಲಿನ ಒಟ್ಟು 3.15ಎಕರೆ ವಿಸ್ತೀರ್ಣದ ಜಮೀನು ಮಾನ್ಯ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಭೂಪರಿ/12/2014–15, ದಿನಾಂಕ:15.06.2016ರಂದು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿರುವ ಆದೇಶವನ್ನು ಲಗತ್ತಿಸಿ ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆಯನ್ನು ಅನುಮೋದಿಸಿಕೊಡಬೇಕೆಂದು ಕೋರಿರುತ್ತಾರೆ ಎಂಬ ವಿಷಯವನ್ನು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿಯಾಮಾನುಸಾರ ಭೂ ವಿನ್ಯಾಸ ಅನುಮೋದನೆ ನೀಡಲು ಕ್ರಮ ಕೈಗೊಳ್ಳಬಹುದೆಂದು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ12:–**ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಖಾಸಗಿ ವಿನ್ಯಾಸಗಳಲ್ಲಿನ ಸಿ.ಎ.ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಖಾತೆ ಮಾಡಿಕೊಡುವ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಕನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1981 ಮತ್ತು ಸರ್ಕಾರದ ಸುತ್ತೋಲೆಯನ್ವಯ ಖಾಸಗಿ ವಿನ್ಯಾಸವನ್ನು ಅನುಮೋದನೆ ನೀಡುವ ಸಂಧರ್ಭದಲ್ಲಿ ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿರುವ ಜಮೀನನ್ನು ಯಾವುದೇ ಫಲಾಪಲಾಪೇಕ್ಷೆಯಿಲ್ಲದೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಭೂ ಮಾಲೀಕರು ಪರಿತ್ಯಾಜ್ಯನ ಪತ್ರದ ಮೂಲಕ ನೊಂದಾಯಿಸಿಕೊಡಬೇಕಾಗಿರುವುದರಿಂದ ಈಗಾಗಲೇ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿನ ಸಿ.ಎ.ನಿವೇಶನಗಳಿಗೆ ನಗರಸಭೆಯ ಸ್ವಾಧೀನದಲ್ಲಿರುವುದನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಖಾತೆ ವರ್ಗಾವಣೆ ಮಾಡಿಕೊಡುವಂತೆ ಸಭೆಯಲ್ಲಿ ಪೌರಾಯುಕ್ತರಿಗೆ ಸೂಚಿಸಲಾಯಿತು ತಪ್ಪಿದಲ್ಲಿ ಮಾನ್ಯ ಜಿಲಾಧಿಕಾರಿಯವರ ಮೂಲಕ ಸಿ.ಎ.ನಿವೇಶನಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರುವಂತೆ ಪ್ರಾಧಿಕಾರದ ಆಯುಕ್ತರಿಗೆ ಸಭೆಯಲ್ಲಿ ಸೂಚಿಸಲಾಯಿತು.

ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 1–13(1):–** ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 1/13ಪಿ3 ರಲ್ಲಿ ಅಂದಾಜು 61.78ಎಕರೆ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರಕ್ಕೆ ಮಂಜೂರು ಮಾಡಿಕೊಡಲು ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿ, ಅವರ ಪತ್ರ ಸಂಖ್ಯೆ:ಜಾಗ/90/2015–16, ದಿನಾಂಕ:07.11.2015ರಲ್ಲಿ ಸದರಿ ಸರ್ವೆ

ನಂಬರ್ 1/13ಪಿ3 ರಲ್ಲಿರುವ 61.78ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 11.80 ಎಕರೆ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರದಿಂದ ವಸತಿ ಉದ್ದೇಶದ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಸಾರ್ವಜನಿಕರಿಗೆ ಹಂಚಲು ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿರವರ ಹೆಸರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಾಮಾವಳಿಯ 1969ರನ್ವಯ ಮಂಜೂರಾತಿ ಮಾಡಲು ಸರ್ಕಾರದ ಪೂರ್ವಾನುಮೋದನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬೆಂಗಳೂರುರವರನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ಸದರಿ ಸರ್ವೆ ನಂಬರಿನಲ್ಲಿ ಬರುವ ಅಂದಾಜು 7.70ಎಕರೆ ವಿಸ್ತೀರ್ಣದ ಜಮೀನನ್ನು ಖಾಸಗಿಯವರಿಗೆ ಭೂ ಮಂಜೂರು ಮಾಡಲಾಗಿದ್ದು, ಪ್ರಾಧಿಕಾರಕ್ಕೆ 11.80ಎಕರೆ ವಿಸ್ತೀರ್ಣದ ಜಮೀನನ್ನು ಮಾತ್ರ ಭೂ ಮಂಜೂರಾತಿ ಮಾಡಿಕೊಡಲು ಮಾನ್ಯ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಪ್ರಾಧಿಕಾರವು ಸದರಿ ಯೋಜನೆಯನ್ನು ಕಾರ್ಯಗತಗೊಳಿಸಿದಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವಾಗ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಆ ವಿನ್ಯಾಸದಲ್ಲಿಯೇ ಅಳವಡಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡುವುದರಿಂದ ಮಡಿಕೇರಿ ನಗರಕ್ಕೆ ಸರಬರಾಜು ಆಗುತ್ತಿರುವ ಕುಡಿಯುವ ನೀರಿನ ಘಟಕಕ್ಕಾಗಲೀ/ಗ್ರಾಮಸ್ಥರಿಗಾಗಲೀ ಯಾವುದೇ ಅನಾನುಕೂಲತೆ ಉಂಟಾಗುವುದಿಲ್ಲವೆಂದು ಮಾಹಿತಿಯನ್ನು ನೀಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡುತ್ತಾ, ವಿರಾಜಪೇಟೆ ಕ್ಷೇತ್ರದ ವಿಧಾನ ಸಭಾ ಸದಸ್ಯರು ಸದರಿ ಯೋಜನೆಯ ಜಮೀನು ಕೂಟುಹೊಳೆ ಸಮೀಪ ಬರುತ್ತಿದ್ದು, ಮಡಿಕೇರಿ ನಗರಕ್ಕೆ ಶುದ್ಧ ಕುಡಿಯುವ ನೀರು ಅಲ್ಲಿಂದಲೇ ಸರಬರಾಜು ಆಗುತ್ತಿರುವುದರಿಂದ ಕುಡಿಯುವ ಶುದ್ಧ ಜಲಮೂಲ ಮಲೀನಗೊಳ್ಳದಂತೆಯೂ ಹಾಗೂ ಈಗಾಗಲೇ ಅರಣ್ಯ ಇಲಾಖೆಯವರು ಬೆಳೆಸಿರುವ ನೆಡುತೋಪುಗಳನ್ನು ಉಳಿಸಿಕೊಳ್ಳುವ ಹಾಗೂ ಪರಿಸರ ಹಾಳಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಬಗ್ಗೆ ಅಲ್ಲಿಯ ಗ್ರಾಮಸ್ಥರ ಮತ್ತು ಕೆ.ನಿಡುಗಣೆ ಗ್ರಾಮ ಪಂಚಾಯಿತಿಯ ವಿರೋಧವಿರುವುದರಿಂದ ಅಲ್ಲಿಯ ಗ್ರಾಮಸ್ಥರ ಹಿತದೃಷ್ಟಿಯಿಂದ ಸದರಿ ಯೋಜನೆಯನ್ನು ಕೈಬಿಡುವುದು ಸೂಕ್ತವೆಂದು ಸಭೆಯಲ್ಲಿ ಅವರ ಅಭಿಪ್ರಾಯವನ್ನು ತಿಳಿಸಿದರು. ಇದಕ್ಕೆ ಪ್ರತಿಯಾಗಿ ಪ್ರಾಧಿಕಾರದ ಅಧ್ಯಕ್ಷರು ಮಾತನಾಡುತ್ತಾ, ಈ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸುವಂತೆ ಹಾಗೂ ಸದರಿ ಜಾಗದ ಸಮೀಪದಲ್ಲಿಯೇ ಈಗಾಗಲೇ ಮಹೇಂದ್ರ ರೆಸಾರ್ಟ್, ಹೊಟೇಲ್ ತಾಜ್ ಮತ್ತು ನವೋದಯ ವಿದ್ಯಾಸಂಸ್ಥೆಯ ಕಟ್ಟಡಗಳು ಬಂದಿದ್ದು, ಹಾಗೂ ಖಾಸಗಿಯವರಿಗೆ ಈಗಾಗಲೇ 7.70ಎಕರೆ ವಿಸ್ತೀರ್ಣದ ಜಮೀನನ್ನು ಇದೇ ಸರ್ವೆ ನಂಬರಿನಲ್ಲಿ ಮಂಜೂರು ಮಾಡಿದ್ದು, ಈ ಎಲ್ಲಾ ಅಭಿವೃದ್ಧಿ ಕಾರ್ಯಗಳಿಂದ ಕುಡಿಯುವ ನೀರು ಕಲುಷಿತಗೊಳ್ಳುವುದಿಲ್ಲವೇ ಎಂದು ಪ್ರಶ್ನಿಸುತ್ತಾ, ಈಗಾಗಲೇ ಸರ್ಕಾರಕ್ಕೆ ಭೂ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿರುವುದರಿಂದ ಸರ್ಕಾರದ ಮುಂದಿನ ಆದೇಶದಂತೆ ಕ್ರಮ ಕೈಗೊಳ್ಳುವುದು ಸೂಕ್ತವೆಂದು ತಿಳಿಸಿರುವುದನ್ನು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

ಇದನ್ನು ಹೊರತುಪಡಿಸಿ ಉಳಿದಂತೆ ಹಿಂದಿನ ಸಭೆಯ ನಡಾವಳಿಯನ್ನು ಓದಿ ಅಂಗೀಕರಿಸಲಾಗಿತು.

**2) ವಿಷಯ ಸಂಖ್ಯೆ :2**

2016ನೇ ಫೆಬ್ರವರಿ ತಿಂಗಳಿನಿಂದ ಏಪ್ರಿಲ್ 2016ನೇ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 1,99,030.00 |
| 2. | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 19,148.00 |

| | | | |
|---|---|---|---|
| 3. | ಕೆರೆ ಅಭಿವೃದ್ಧಿ ಶುಲ್ಕ | ರೂ. | 2,46,000.00 |
| 4. | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 638.00 |
| 5. | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ<br>1. ಕಾವೇರಿ ಗ್ರಾಮೀಣ ಬ್ಯಾಂಕು (ಸಿ.ಎ. + ಪಾರ್ಕ್ ವಿನಾಯಿತಿ ಶುಲ್ಕ) | ರೂ. | 55,718.00 |
| | 2. ಇಂಡಿಯನ್ ಬ್ಯಾಂಕು | ರೂ. | 52,131.00 |
| | 3. ಇಂಡಿಯನ್ ಬ್ಯಾಂಕು (ಅಕ್ರಮ – ಸಕ್ರಮ) | ರೂ. | 2,484.00 |
| 6. | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 24,000.00 |
| 7 | ಜೂನ್ 2015ರ ಆಯುಕ್ತರ ಪ್ರಭಾರ ಭತ್ಯೆ ಚೆಕ್ ನಗದಾಗಿರುವುದಿಲ್ಲ | ರೂ. | 2,108.00 |
| 8 | ಇತರೆ | ರೂ. | 200.00 |
| | **ಒಟ್ಟು ಜಮೆ** | ರೂ. | **6,01,457.00** |

<u>**ಖರ್ಚು**</u>

| | | | |
|---|---|---|---|
| 1 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 79,881.00 |
| 2 | ಆಯುಕ್ತರ ಪ್ರಭಾರ ಭತ್ಯೆ | ರೂ. | 6,324.00 |
| 3 | ಸಿಬ್ಬಂದಿ ವೇತನ | ರೂ. | 99,294.00 |
| 4 | ಕಂಪ್ಯೂಟರ್ ದುರಸ್ಥಿ ವೆಚ್ಚ | ರೂ. | 750.00 |
| 5 | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 1,886.00 |
| 6 | ವಕೀಲರ ಶುಲ್ಕ ಪಾವತಿ | ರೂ. | 15,000.00 |
| 7 | ದೂರವಾಣಿ ವೆಚ್ಚ | ರೂ. | 3,851.00 |
| 8 | ಅಂಚೆ ಚೀಟಿ ಖರೀದಿ | ರೂ. | 1,000.00 |
| 9 | ಕಚೇರಿ ಸಾದಿಲ್ವಾರು ವೆಚ್ಚ | ರೂ. | 2,000.00 |
| 10 | ಅಧ್ಯಕ್ಷರ ಕೊಠಡಿ ದುರಸ್ಥಿ ಮತ್ತು ಸುಣ್ಣ ಬಣ್ಣ ಬಳಿದಿರುವ ಬಾಬ್ತು ಖರ್ಚು | ರೂ. | 6,500.00 |
| 11 | ದಿನಪತ್ರಿಕೆ ಖರೀದಿ | ರೂ. | 1,600.00 |
| 12 | ಪ್ರಾಧಿಕಾರದ ಹಿಂದಿನ ಆಯುಕ್ತರಾಧ ಶ್ರೀ ಎಲ್.ಶಿವಮಲ್ಲುರವರಿಗೆ ಪರಿಷ್ಕೃತ ವೇತನದ ವ್ಯತ್ಯಾಸ ಪಾವತಿ (ನವೆಂಬರ್ 2000 ರಿಂದ ಡಿಸೆಂಬರ್ 2003ರವರೆಗೆ) | ರೂ. | 3,15,829.00 |
| 13 | ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳ ಬಾಬ್ತು<br>1. ಸೇಲ್ಸ್ ಟ್ಯಾಕ್ಸ್ ಪಾವತಿ | ರೂ. | 82,961.00 |
| | 2. ಆದಾಯ ತೆರಿಗೆ ಪಾವತಿ | ರೂ. | 41,480.00 |
| | 3. ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿ | ರೂ. | 25,642.00 |
| | 4. ರಾಯಲ್ಟಿ ಪಾವತಿ | ರೂ. | `9,605.00 |
| | **ಒಟ್ಟು ವೆಚ್ಚ** | ರೂ. | **6,93,603.00** |

<u>**ಘೋಶ್ವಾರೆ:**</u>

| | | | |
|---|---|---|---|
| 1 | 2016ನೇ ಫೆಬ್ರವರಿ ತಿಂಗಳಿನ ಆರಂಭಿಕ ಶಿಲ್ಕು | ರೂ. | 1,14,06,668.00 |

| | | | |
|---|---|---|---|
| 2 | 2016ನೇ ಫೆಬ್ರವರಿ ತಿಂಗಳಿನಿಂದ ಏಪ್ರಿಲ್ 2016ರವರೆಗಿನ ಜಮೆ | ರೂ. | 6,01,457.00 |
| 3 | ಒಟ್ಟು ಜಮೆ | ರೂ. | **1,20,08,125.00** |
| 4 | 2016ನೇ ಫೆಬ್ರವರಿ ತಿಂಗಳಿನಿಂದ ಏಪ್ರಿಲ್ 2016ರವರೆಗಿನ ಖರ್ಚು | ರೂ. | 6,93,603.00 |
| 5 | 2016ನೇ ಏಪ್ರಿಲ್ ತಿಂಗಳ ಆಖೈರು ಶಿಲ್ಕು | ರೂ. | **1,13,14,522.00** |
| 6 | ಠೇವಣಿ ಇಟ್ಟಿರುವುದು | ರೂ. | 1,44,73,148.00 |
| | ಒಟ್ಟು ಮೊಬಲಗು | ರೂ. | **2,57,87,670.00** |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–** 2016ನೇ ಫೆಬ್ರವರಿ ತಿಂಗಳಿನಿಂದ ಏಪ್ರಿಲ್ 2016ನೇ ತಿಂಗಳವರೆಗಿನ ಜಮಾ ರೂ. **6,01,457.00/–** ಮತ್ತು ಖರ್ಚು ರೂ. **6,93,603.00/–**ಗಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3)ವಿಷಯಸಂಖ್ಯೆ 3: ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಕಟ್ಟಡವನ್ನು ನಿರ್ಮಿಸಲು ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 98/25 ರಲ್ಲಿರುವ ಅಂದಾಜು 0.90 ಎಕರೆ ವಿಸ್ತೀರ್ಣದ ಜಮೀನಿಗೆ ಸರ್ಕಾರದಿಂದ ಭೂ ಮಂಜೂರಾತಿ ಆದೇಶವನ್ನು ಪಡೆಯುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾದೇಶಿಕ ಆಯುಕ್ತರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡ ಹಳೆಯ ವೇ ಬ್ರಿಡ್ಜ್ ಬಿಲ್ಡಿಂಗ್‌ನ್ನು ಪ್ರಾಧಿಕಾರದ ವತಿಯಿಂದ ತಾತ್ಕಾಲಿಕವಾಗಿ ದುರಸ್ಥಿ ಪಡಿಸಿಕೊಂಡು ಕಚೇರಿಯನ್ನು ನಡೆಸುತ್ತಿರುವುದಾಗಿದೆ. ಈ ಕಟ್ಟಡವು ತುಂಬಾ ಶಿಥಿಲವಾಗಿದ್ದು ಮತ್ತು ಅತ್ಯಂತ ಚಿಕ್ಕದಾಗಿರುವುದರಿಂದ ಸಭಾ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಕಡತಗಳನ್ನು ಸುಸ್ಥಿತಿಯಲ್ಲಿ ಇಡಲು ರೆಕಾರ್ಡ್ ರೂಂ ಸಹ ಅವಶ್ಯಕತೆ ಇದ್ದು, ಈ ಎಲ್ಲವನ್ನು ಈ ಕಚೇರಿಯಲ್ಲಿ ಅಳವಡಿಸುವುದು ಕಷ್ಟಸಾಧ್ಯವಾಗಿರುವುದರಿಂದ ಪ್ರಾಧಿಕಾರ ಕಚೇರಿಗೆ ಬೇರೆ ಕಟ್ಟಡದ ಅವಶ್ಯಕತೆ ತುಂಬಾ ಇರುವುದರಿಂದ ನಗರಸಭಾ ವ್ಯಾಪ್ತಿಯಲ್ಲಿ ಬರುವ ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 98/25 ರಲ್ಲಿನ 0.90 ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನನ್ನು ಪ್ರಾಧಿಕಾರಕ್ಕೆ ಮಂಜೂರಾತಿ ಮಾಡಿಕೊಡುವ ಬಗ್ಗೆ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸಾವನೆಗೆ ಸರ್ಕಾರದಿಂದ ಮಂಜೂರಾತಿ ಪಡೆದು ಪ್ರಾಧಿಕಾರದ ಕಚೇರಿ ಕಟ್ಟಡವನ್ನು ನಿರ್ಮಿಸಲು ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**ಸರ್ಕಾರದಿಂದ ಭೂ ಮಂಜೂರಾತಿಯಾಗಿ ಆದೇಶ ಬಂದ ನಂತರ ಪ್ರಾಧಿಕಾರದ ಹೆಸರಿಗೆ ಖಾತೆ ವರ್ಗಾಯಿಸಿಕೊಂಡು ಮುಂದಿನ ಕ್ರಮ ವಹಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**4)ವಿಷಯಸಂಖ್ಯೆ4: ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಹಿಂದೆ ಅನುಮೋದಿಸಿರುವ ಖಾಸಗಿ ವಿನ್ಯಾಸಗಳಲ್ಲಿನ ಸಿ.ಎ. ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಖಾತೆ ವರ್ಗಾವಣೆ ಮಾಡುವ ಬಗ್ಗೆ.**

**ಟಿಪ್ಪಣಿ:–** ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿ ವಿನ್ಯಾಸವನ್ನು ಅನುಮೋದಿಸುವಾಗ ಸಿ.ಎ.ನಿವೇಶನವೆಂದು ಕಾಯ್ದಿರಿಸುವ ಜಾಗವನ್ನು ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ದಾನ ಪತ್ರದ ಮೂಲಕ ಫಲಾಫಲಾಪೇಕ್ಷೆಯಿಲ್ಲದೆ ನೋಂದಣಿ ಮಾಡಿಕೊಡಬೇಕಾಗಿರುತ್ತದೆ. ಈ ಹಿಂದೆ ಖಾಸಗಿ ವಿನ್ಯಾಸಗಳನ್ನು ಅನುಮೋದಿಸುವಾಗ ಸಿ.ಎ.ನಿವೇಶನಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲು ತಿಳಿಸಲಾಗಿದೆ. ಆದರೆ ಇಂತಹ ವಿನ್ಯಾಸಗಳಲ್ಲಿನ ಭೂ ಮಾಲೀಕರು ದಾನ ಪತ್ರದ ಮೂಲಕ ನಗರಸಭೆಗೆ ಹಸ್ತಾಂತರಿಸದೆ ಸದರಿ ಲೇಔಟಿನ ಜಾಗವು ಅತಿಕ್ರಮಣವಾಗಿರುವುದು ಅಥವಾ ಭೂ ಮಾಲೀಕರೇ ಇಟ್ಟುಕೊಳ್ಳುವುದು/ಮಾರಾಟ ಮಾಡಿರುವುದು ಕಂಡುಬರುತ್ತಿದೆ. ಇದಕ್ಕೆ ಅವಕಾಶವಾಗದಂತೆ ಸಿ.ಎ.ನಿವೇಶನಗಳನ್ನು

ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ನಗರಸಭೆಯಿಂದ ಖಾತೆ ವರ್ಗಾವಣೆ ಮಾಡಿಕೊಂಡಲ್ಲಿ ಸಾರ್ವಜನಿಕ ಉದ್ದೇಶದ ಕೆಲಸಗಳಿಗಾಗಿ ಪ್ರಾಧಿಕಾರವು ಹರಾಜು ಹಾಕಿದಲ್ಲಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅನುಕೂಲವಾಗುತ್ತದೆ ಆದ್ದರಿಂದ ನಗರಸಭಾ ವ್ಯಾಪ್ತಿಯಲ್ಲಿ ಎಲ್ಲಾ ಖಾಸಗಿ ವಿನ್ಯಾಸ ನಕ್ಷೆಗಳಲ್ಲಿನ ಸಿ.ಎ.ನಿವೇಶನಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸಾಂತರಿಸಿ ಅಥವಾ ಖಾತೆ ವರ್ಗಾವಣೆ ಮಾಡಿ ಕೊಡುವ ಬಗ್ಗೆ ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**ನಿರ್ಣಯ:–** ವಿಷಯಸಂಖ್ಯೆ–1(12)ರಲ್ಲಿ ತೀರ್ಮಾನಿಸಿರುವಂತೆ ಈಗಾಗಲೇ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿನ ಸಿ.ಎ.ನಿವೇಶನಗಳು ನಗರಸಭೆಯ ಸ್ವಾಧೀನದಲ್ಲಿರುವುದನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಖಾತೆ ವರ್ಗಾವಣೆ ಮಾಡಿಕೊಡುವಂತೆ ಸಭೆಯಲ್ಲಿ ಪೌರಾಯುಕ್ತರಿಗೆ ಸೂಚಿಸಲಾಯಿತು. ತಪ್ಪಿದಲ್ಲಿ ಸಿ.ಎ.ನಿವೇಶನಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಿಕೊಳ್ಳಲು ಮಾನ್ಯ ಜಲ್ಲಾಧಿಕಾರಿಯವರನ್ನು ಕೋರಲು ಪ್ರಾಧಿಕಾರದ ಆಯುಕ್ತರಿಗೆ ಮತ್ತೊಮ್ಮೆ ಸೂಚಿಸಿ, ಅದರಂತೆ ಕ್ರಮ ವಹಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5)ವಿಷಯ ಸಂಖ್ಯೆ 5 :– ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡುವ ಸಂಧರ್ಭದಲ್ಲಿ ನಕ್ಷೆಯಲ್ಲಿ ಮಳೆ ನೀರಿನ ಕೊಯ್ಲನ್ನು ಅಳವಡಿಸುವುದು ಮತ್ತು ಅಳವಡಿಸಿರುವುದನ್ನು ಖಾತ್ರಿಗೊಳಿಸುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ತುಂಬಾ ಇರುವುದರಿಂದ ಮಳೆ ನೀರು ಕೊಯ್ಲನ್ನು ಪ್ರತಿಯೊಬ್ಬ ನಾಗರೀಕನೂ ಅಳವಡಿಸಿಕೊಳ್ಳುವುದು ಅತ್ಯಾವಶ್ಯಕವಾಗಿರುವುದರಿಂದ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡುವ ಸಂದರ್ಭದಲ್ಲಿ ಮಳೆ ನೀರು ಕೊಯ್ಲನ್ನು ನಕ್ಷೆಯಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸತಕ್ಕದೆಂದು ಹಾಗೂ ಮನೆ ನಿರ್ಮಾಣ ಕಾರ್ಯದ ಅಂತಿಮ ಹಂತದಲ್ಲಿ ಮಳೆ ನೀರು ಕೊಯ್ಲನ್ನು ಅಳವಡಿಸಿರುವುದನ್ನು ಪ್ರಾಧಿಕಾರದಿಂದ ದೃಢೀಕರಿಸುವುದನ್ನು ಸಹ ಕಡ್ಡಾಯಗೊಳಿಸುವುದರಿಂದ ನೀರಿನ ಅಭಾವವನ್ನು ತಡೆಯುವಲ್ಲಿ ಪ್ರಗತಿಯನ್ನು ಕಾಣಬಹುದಾಗಿರುತ್ತದೆ. ಆದ್ದರಿಂದ ಮಳೆ ನೀರು ಕೊಯ್ಲನ್ನು ನಕ್ಷೆಯಲ್ಲಿ ಅಳವಡಿಸುವುದನ್ನು ಕಡ್ಡಾಯಪಡಿಸುವುದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಕೆ.ಟಿ.ಸಿ.ಪಿ ಕಾಯ್ದೆ 1961 ಮತ್ತು ಅನುಮೋದಿತ ವಲಯನಿಯಾಮಾವಳಿಗಳಲ್ಲಿ ನಿಗಧಿಪಡಿಸಿರುವಂತೆ ಮಳೆ ನೀರಿನ ಕೊಯ್ಲನ್ನು ನಕ್ಷೆಯಲ್ಲಿ ಮತ್ತು ನಿವೇಶನದಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸತಕ್ಕದೆಂದು ನಗರಸಭೆ ಮತ್ತು ಪ್ರಾಧಿಕಾರದ ಆಯುಕ್ತರುಗಳಿಗೆ ಸೂಚಿಸಿ, ಸಭೆಯು ಸರ್ವಾನುಮತಸ ಅಂಗೀಕಾರ ನೀಡಿತು.

**6)ವಿಷಯಸಂಖ್ಯೆ 6:– ವಸತಿ ವಿನ್ಯಾಸ ಅಭಿವೃದ್ಧಿ ಪಡಿಸುವಾಗ ಭೂ ಮಾಲೀಕರು ನೀರು ಸರಬರಾಜು ಒಳಚರಂಡಿ (ಎಸ್.ಟಿ.ಪಿ) ನಿರ್ಮಾಣ ಹಾಗೂ ಸೆಪ್ಟಿಕ್ ಟ್ಯಾಂಕ್‌ಗಳನ್ನು ನಿರ್ಮಿಸಿ ನಿರ್ವಹಣೆ ಮಾಡುವ ಬಗ್ಗೆ.**

**ಟಿಪ್ಪಣಿ:–**ಸರ್ಕಾರದ ಪತ್ರ ಸಂಖ್ಯೆ: ನಅಇ/08/ಟಿಟಿಪಿ/2013, ದಿನಾಂಕ:24.05.2014ರ ಸುತ್ತೋಲೆಯಲ್ಲಿ ಖಾಸಗಿ ವಿನ್ಯಾಸ ಅನುಮೋದನೆ ಮತ್ತು ಅಭಿವೃದ್ಧಿ ಪಡಿಸುವಿಕೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ನೀಡಿರುವ ಮಾರ್ಗಸೂಚಿಯಂತೆ ಅನುಮೋದಿಸಿದ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ರಸ್ತೆ, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು, ವಿದ್ಯುತ್‌ಚ್ಛಕ್ತಿ ಸಂಪರ್ಕ, ಮಳೆ ನೀರು ಸಂಗ್ರಹಣೆ, ಉದ್ಯಾನವನ ಅಭಿವೃದ್ಧಿ, ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ, ಎಸ್.ಟಿ.ಪಿ.ಅಳವಡಿಸುವುದು/ಸೆಪ್ಟಿಕ್‌ಟ್ಯಾಂಕ್ ವ್ಯವಸ್ಥೆಯನ್ನು ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್‌ಚ್ಛಕ್ತಿ

ಇಲಾಖೆ ಹಾಗೂ ತೋಟಗಾರಿಕಾ ಇಲಾಖೆ ನಿಗಧಿಪಡಿಸುವ ವಿಧಾನದಲ್ಲಿ ಕಾರ್ಯಗತಗೊಳಿಸುವುದು ಹಾಗೂ ಈ ಬಗ್ಗೆ ಸ್ಥಳೀಯ ಸಂಸ್ಥೆಯ ಇಂಜಿನಿಯರ್ ಶಾಖೆಯಿಂದ ದೃಢೀಕರಿಸಿ ಅಗತ್ಯ ಪ್ರಮಾಣ ಪತ್ರ ಪಡೆಯುವುದು. ಎಸ್.ಟಿ.ಪಿ./ಸೆಪ್ಟಿಕ್ ಟ್ಯಾಂಕ್‌ಗಳನ್ನು ಖಾಸಗಿ ವಿನ್ಯಾಸದಲ್ಲಿ ಅಳವಡಿಸಿರುವುದನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ನಗರಸಭೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ನಿರ್ಮಿಸಿರುವ ಲೈನ್‌ಗಳಿಗೆ ಸಂಪರ್ಕವನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆ.

**ನಿರ್ಣಯ:–** ಈ ಮೇಲಿನ ಪ್ರಸ್ತಾವನೆ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು ಹಾಗೂ ಈಗಾಗಲೇ ಶ್ರೀ ಬಿ.ಜಿ.ಚಂಗಪ್ಪರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಕೇಶವ ಪ್ರಸಾದ್ ಮುಳಿಯರವರು ಕೆ.ಬಾಡಗ ಗ್ರಾಮದ ಸರ್ವೆ ನಂಬರ್ 74/1, 74/5, 75/1 ಮತ್ತು 75/6 ರಲ್ಲಿರುವ 10.10ಎಕರೆ ವಿಸ್ತೀರ್ಣದ ಜಾಗಕ್ಕೆ ವಸತಿ ವಿನ್ಯಾಸ ಅನುಮೋದನೆಯನ್ನು ಪಡೆದುಕೊಂಡಿರುವ ವಿನ್ಯಾಸದಲ್ಲಿನ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆ ಮಾಡಿ ಕೊಡಲು ಕೋರಿರುತ್ತಾರೆ ಎಂದು ಅಧ್ಯಕ್ಷರು/ಆಯುಕ್ತರು ಸಭೆಯಲ್ಲಿ ತಿಳಿಸಿ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವ ಮೊದಲು ಪೂರ್ಣ ಪ್ರಮಾಣದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸರ್ಕಾರದ ಸುತ್ತೋಲೆಯನ್ವಯ ನಿವೇಶನಗಳಲ್ಲಿನ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಎನ್.ಒ.ಸಿ. ಪಡೆದ ನಂತರ ಅಂತಿಮ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸರ್ವಾನುಮತದ ಅಂಗೀಕಾರ ನೀಡಿತು.

**7)ವಿಷಯ ಸಂಖ್ಯೆ 7:–ಶ್ರೀ ಮಂಜುನಾಥ್ ಸ್ವಾಮಿ, ಕಡಗದಾಳು ಗ್ರಾಮ, ಮಡಿಕೇರಿ ತಾಲ್ಲೂಕು ರವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕಡಗದಾಳು ಗ್ರಾಮದ ಸರ್ವೆ ನಂಬರ್ 153/1 ರಲ್ಲಿನ 2.20ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶಕ್ಕೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಮೀನು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುತ್ತಿದ್ದು, 7.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1(ಅಂತಿಮ) 2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಮೀನಿಗೆ ಈ ಕಚೇರಿ ಪತ್ರ ಸಂಖ್ಯೆ:ಮನಅಪ್ರಾ/ಭೂಪರಿ/ ಕಡಗದಾಳು/74/2012–13, ದಿನಾಂಕ:28.03.2013ರಲ್ಲಿ ವಾಣಿಜ್ಯ ಉದ್ದೇಶಕ್ಕೆ (ಹೋಟೇಲ್ ಮತ್ತು ರೆಸಾರ್ಟ್) ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಭೂಪರಿ/60/2015–16, ದಿನಾಂಕ:13.11.2015ರಲ್ಲಿ ಪ್ರಶ್ನಿತ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್) ಭೂ ಪರಿವರ್ತಿಸಿ ಆದೇಶ ನೀಡಿರುತ್ತಾರೆ. ಅರ್ಜಿದಾರರು ಸದರಿ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಯನ್ನು ಅನುಮೋದಿಸಿಕೊಡಲು ಕೋರಿರುವಂತೆ ಪ್ರಸ್ತಾವಿತ ಜಾಗವು ವಾಣಿಜ್ಯ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ವಾಣಿಜ್ಯಕ್ಕೆ ಶೇ.84.03, ಉದ್ಯಾನವನಕ್ಕೆ ಶೇ. 10, ವಾಹನ ನಿಲುಗಡೆಗಾಗಿ ಶೇ.5, ರಸ್ತೆಗಾಗಿ ಶೇ. 0.97 ಜಾಗಗಳನ್ನು ಕಾಯ್ದಿರಿಸಿದ್ದು ಪ್ರಾಧಿಕಾರದ ನಿಧಿಗೆ ಒಟ್ಟು ಶುಲ್ಕ ರೂ. 2,56,723/– ಮಾತ್ರವನ್ನು ಪಾವತಿಸಿಕೊಂಡು ತಾಂತ್ರಿಕ ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕಡಗದಾಳು ಗ್ರಾಮದ ಸರ್ವೆ ನಂಬರ್ 153/1 ರಲ್ಲಿನ 2.20ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶಕ್ಕೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**8)ವಿಷಯಸಂಖ್ಯೆ 8:- ಶ್ರೀ ಪೌಲ್ ಪಿ.ಜಾನ್, ಮೆ|| ಪೌಲ್ಸ್ ರೆಸಾರ್ಟ್ ಅಂಡ್ ಹೊಟೇಲ್ಸ್, ಪ್ರೈ.ಲಿ, ಮೇಕೇರಿ ಗ್ರಾಮ, ಮಡಿಕೇರಿರವರು ಅರ್ಜಿ ಸಲ್ಲಿಸಿ ಮಡಿಕೇರಿ ತಾಲ್ಲೂಕು ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 117/1ರಲ್ಲಿ 1.36ಎಕರೆ 117/2ರ 0.80ಎಕರೆ 81/4ರ 9.30ಎಕರೆ, 79ರ 2.06ಎಕರೆ, 78/1ರ 2.06ಎಕರೆ, 78/2ರ 1.00ಎಕರೆ, 78/3ರ 0.30ಎಕರೆ, 77ರ 2.28ಎಕರೆ, 76/2ರ 0.76ಎಕರೆ, 76/4ರ 4.00ಎಕರೆ ಮತ್ತು ಸ.ನಂ. 121ರ 3.30ಎಕರೆ ಒಟ್ಟು 27.22ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.**

**ಟಿಪ್ಪಣಿ:-** ಪ್ರಸ್ತಾವಿತ ಜಮೀನು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುತ್ತಿದ್ದು, 6.00ಮೀ ಹಾಗೂ 10.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ-1(ಅಂತಿಮ) 2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಪ್ರಸ್ತಾವಿತ ಜಮೀನಿಗೆ ಈ ಕಚೇರಿ ಪತ್ರ ಸಂಖ್ಯೆ: ಮನಅಪ್ರಾ/ಭೂಪರಿ/ಮೇಕೇರಿ/52/2015-16, ದಿನಾಂಕ:08.10.2015ರಲ್ಲಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರು ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಭೂಪರಿ/321/2015-16, ದಿನಾಂಕ:02.03.2016ರ ಪ್ರಶ್ನಿತ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶ ನೀಡಿರುತ್ತಾರೆ. ಅರ್ಜಿದಾರರು ಸದರಿ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಯನ್ನು ಅನುಮೋದಿಸಿಕೊಡಲು ಕೋರಿರುವಂತೆ ಪ್ರಸ್ತಾವಿತ ಜಾಗವು ವಾಣಿಜ್ಯ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ಹಾಲಿ ಇರುವ 6.00ಮೀ ಅಗಲದ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸಿ ನೀಲಿ ನಕ್ಷೆ ಸಲ್ಲಿಸಿರುವುದನ್ನು ಪರಿಗಣಿಸಿ ವಾಣಿಜ್ಯಕ್ಕೆ ಶೇ.84.99, ಉದ್ಯಾನವನಕ್ಕೆ ಶೇ. 10, ವಾಹನ ನಿಲುಗಡೆಗಾಗಿ ಶೇ.5, ರಸ್ತೆಗಾಗಿ ಶೇ.0.01 ವಿಸ್ತೀರ್ಣದ ಜಾಗಗಳನ್ನು ಕಾಯ್ದಿರಿಸಿದ್ದು ಪ್ರಾಧಿಕಾರದ ನಿಧಿಗೆ ಒಟ್ಟು ಶುಲ್ಕ ರೂ. 31,76,248/- ಮಾತ್ರವನ್ನು ಪಾವತಿಸಿಕೊಂಡು ತಾಂತ್ರಿಕ ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-** ಮಡಿಕೇರಿ ತಾಲ್ಲೂಕು ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 117/1ರಲ್ಲಿ 1.36ಎಕರೆ 117/2ರ 0.80ಎಕರೆ 81/4ರ 9.30ಎಕರೆ, 79ರ 2.06ಎಕರೆ, 78/1ರ 2.06ಎಕರೆ, 78/2ರ 1.00ಎಕರೆ, 78/3ರ 0.30ಎಕರೆ, 77ರ 2.28ಎಕರೆ, 76/2ರ 0.76ಎಕರೆ, 76/4ರ 4.00ಎಕರೆ ಮತ್ತು ಸ.ನಂ. 121ರ 3.30ಎಕರೆ ಒಟ್ಟು 27.22ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**9)ವಿಷಯ ಸಂಖ್ಯೆ 9:- ಶ್ರೀ ಸುಧೀಂದ್ರ ತೀರ್ಥ ಸ್ವಾಮಿ, ಕರ್ಣಂಗೇರಿ, ಮಡಿಕೇರಿರವರು ಅರ್ಜಿ ಸಲ್ಲಿಸಿ ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 317/1ರಲ್ಲಿನ 0.28ಎಕರೆ ವಿಸ್ತೀರ್ಣದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ತಾಂತ್ರಿಕ ಅಭಿಪ್ರಾಯವನ್ನು ಕೋರಿರುತ್ತಾರೆ.**

**ಟಿಪ್ಪಣಿ:-** ಪ್ರಸ್ತಾವಿತ ಜಾಗವು ಅನುಮೋದಿತ ಮಹಾಯೋಜನೆ ಪರಿಷ್ಕೃತ-1(ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ಮಡಿಕೇರಿ ನಗರದ ಎ.ವಿ.ಶಾಲೆ ರಸ್ತೆಯಿಂದ ಸೋಮವಾರಪೇಟೆಗೆ ಹೋಗುವ 11.90ಮೀ ಅಗಲದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದಲ್ಲಿ ಸುಮಾರು 321.00ಚ.ಮೀ ವಿಸ್ತೀರ್ಣದ ಮಠದ ಕಟ್ಟಡ ಇರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಪ್ರಸ್ತಾವಿತ ಜಾಗವು ಅನುಮೋದಿತ ಮಹಾಯೋಜನೆ ಪರಿಷ್ಕೃತ-1(ಅಂತಿಮ)2021 ರನ್ವಯ ವಾಣಿಜ್ಯ ವಲಯದಲ್ಲಿದ್ದು, ಸುತ್ತಮುತ್ತಲು ವಸತಿ ಹಾಗೂ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುವುದರಿಂದ ಹಾಲಿ ಇರುವ 11.90 ಮೀ ಅಗಲದ ರಸ್ತೆಯನ್ನು 15.00ಮೀ ಅಗಲಕ್ಕೆ ವಿಸ್ತರಿಸಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 317/1ರಲ್ಲಿನ 0.28ಎಕರೆ ವಿಸ್ತೀರ್ಣದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**10)ವಿಷಯಸಂಖ್ಯೆ 10:– ಶ್ರೀಮತಿ ಸುಬ್ಬವ್ವ, ಬಿನ್॥ ಕೆ.ಎಂ.ಕಾವೇರಪ್ಪ, ಕನ್ನಂಡ ಬಾಣೆ, ಮಡಿಕೇರಿರವರು ಅರ್ಜಿ ಸಲ್ಲಿಸಿ, ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 300/35 ರಲ್ಲಿನ 0.11ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯವನ್ನು ಕೋರಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾಯೋಜನೆ ಪರಿಷ್ಕೃತ–1(ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಉತ್ತರದಲ್ಲಿನ 6.00ಮೀ ಅಗಲದ ರಸ್ತೆ ಮತ್ತು ಪಶ್ಚಿಮದಲ್ಲಿ 7.00ಮೀ ಅಗಲದ ರಸ್ತೆಯಿಂದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದಲ್ಲಿ ಸುಮಾರು 15.00ಮೀ ವಿಸ್ತೀರ್ಣದ ಹಳೆಯ ಹಂಚಿನ ಕಟ್ಟಡ ಇರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಅನುಮೋದಿತ ಮಹಾಯೋಜನೆ ಪರಿಷ್ಕೃತ–1(ಅಂತಿಮ)2021ರನ್ವಯ ವಸತಿ ವಲಯದಲ್ಲಿದ್ದು, ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಹಾಲಿ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ನಿಬಂಧನೆಗೆ ಒಳಪಟ್ಟು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 300/35 ರಲ್ಲಿನ 0.11ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು

**11)ವಿಷಯಸಂಖ್ಯೆ 11:– ಶ್ರೀ ಪೂರ್ಣಚಂದ್ರ ರಾವ್, ಶ್ರೀ ಎನ್.ಮೋಹನ್ ರೆಡ್ಡಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ.201/3 ರಲ್ಲಿನ 6.00 ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.**

**ಟಿಪ್ಪಣಿ:–** ಪರಿಶೀಲಿಸಲಾಗಿ ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತದೆ. ಪ್ರಸ್ತಾವಿತ ಜಮೀನನ್ನು ಭೂ ಪರಿವರ್ತಿಸಲು ಈ ಕಚೇರಿ ಪತ್ರ ಸಂಖ್ಯೆ: ಮನಅಪ್ರಾ/ಭೂಪರಿ/ಕರ್ಣಂಗೇರಿ/71/2015–16 ದಿನಾಂಕ: 26.03.2016ರಂದು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಭೂಪರಿ/02/2016–17, ದಿನಾಂಕ:16.04.2016ರಂದು ವಾಣಿಜ್ಯ (ರೆಸಾರ್ಟ್) ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶ ನೀಡಿರುತ್ತಾರೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸದರಿ ಜಮೀನು ಮಡಿಕೇರಿ–ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಪೂರ್ವಕ್ಕೆ ಹಾಲಿ ಇರುವ 12.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ (ಡಾಮರು ರಸ್ತೆ) ಸಂಪರ್ಕ ಹೊಂದಿರುತ್ತದೆ. ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ಉಪಯೋಗದಲ್ಲಿ ಬರುತ್ತಿದ್ದು, ವಾಣಿಜ್ಯ ಉದ್ದೇಶಕ್ಕೆ ಅನುಕೂಲಕರವಾಗಿರುವುದರಿಂದ ಸಲ್ಲಿಸಿರುವ ನೀಲಿ ನಕ್ಷೆಯನ್ನು ಪರಿಗಣಿಸಿ ವಾಣಿಜ್ಯಕ್ಕೆ ಶೇ.85, ಉದ್ಯಾನವನಕ್ಕೆ ಶೇ. 10, ವಾಹನ ನಿಲುಗಡೆಗಾಗಿ ಶೇ.5ರ ವಿಸ್ತೀರ್ಣದ ಜಾಗಗಳನ್ನು ಕಾಯ್ದಿರಿಸಿದ್ದು ಪ್ರಾಧಿಕಾರದ ನಿಧಿಗೆ ಒಟ್ಟು ಶುಲ್ಕ ರೂ.7,00,152/– ಮಾತ್ರವನ್ನು ಪಾವತಿಸಿಕೊಂಡು ತಾಂತ್ರಿಕ ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ.201/3 ರಲ್ಲಿನ 6.00ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ರಸ್ತೆಯ ಬಗ್ಗೆ ಇದ್ದ ವಿವಾದದ ಬಗ್ಗೆ ಪೂರ್ಣ ಮಾಹಿತಿಯನ್ನು ಪ್ರಾಧಿಕಾರದ ಅಧ್ಯಕ್ಷರು ಸಭೆಯಲ್ಲಿ ವಿವರಿಸಿದ ನಂತರ ಪ್ರಸ್ತಾವನೆಗೆ ಅನುಮತಿ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**12)ವಿಷಯಸಂಖ್ಯೆ 12:– ಶ್ರೀಮತಿ ಸಿ.ಪಿ.ಶ್ರೀಮತಿ, ಕೋಂ॥ ರವೀಂದ್ರ.ಸಿ.ಕೆರವರು ಮಡಿಕೇರಿ ತಾಲ್ಲೂಕು,ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 205 ರಲ್ಲಿನ 3.72ಎಕರೆ ವಿಸ್ತೀರ್ಣದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ (ಹೊಟೆಲ್ ಮತ್ತು ಕಾಟೇಜ್) ನಿರ್ಮಿಸಲು ವಿನ್ಯಾಸ ಅನುಮೋದನೆ ನೀಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಾಗಕ್ಕೆ ಮಡಿಕೇರಿಯಿಂದ ಸೋಮವಾರಪೇಟೆಗೆ ಹಾದು ಹೋಗುವ ರಾಜ್ಯ ಹೆದ್ದಾರಿ 12.00ಮೀ ಅಗಲದ ರಸ್ತೆಯಿಂದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ರಸ್ತೆಯನ್ನು 24.00ಮೀ ಅಗಲಕ್ಕೆ ವಿಸ್ತರಿಸಿ ನೀಲಿ ನಕ್ಷೆ ಸಲ್ಲಿಸಿರುವರು. ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತದೆ. ಸದರಿ ಪ್ರಸ್ತಾವನೆಗೆ ಈ ಕಚೇರಿ ಪತ್ರ ಸಂಖ್ಯೆ:ಭೂಪರಿ/ಕರ್ಣಂಗೇರಿ /37/2014–15, ದಿನಾಂಕ:29.11.2014ರಂದು ವಾಣಿಜ್ಯ (ಹೊಟೇಲ್ ಮತ್ತು ಕಾಟೇಜ್) ಉದ್ದೇಶಕ್ಕೆ ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಿದ್ದು, ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರು ತಮ್ಮ ಪತ್ರ ಸಂಖ್ಯೆ: ಭೂಪರಿ/168/2014–15, ದಿನಾಂಕ:13.11.2015ರಂದು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶಿಸಿರುತ್ತಾರೆ. ವಿನ್ಯಾಸ ಅನುಮೋದನೆ ಸಂಬಂಧ ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಂತೆ ವಾಣಿಜ್ಯಕ್ಕೆ 11848.63 ಚ.ಮೀ (ಶೇ.78.68), ಉದ್ಯಾನವನಕ್ಕೆ 1505.85ಚ.ಮೀ (ಶೇ.10.00), ವಾಹನ ನಿಲುಗಡೆಗಾಗಿ 752.92ಚ.ಮೀ, (ಶೇ.05.00) ಹಾಗೂ ರಸ್ತೆ ವಿಸ್ತರಣೆಗಾಗಿ 951.16ಚ.ಮೀ (ಶೇ.06.32) ವಿಸ್ತೀರ್ಣದ ಪ್ರದೇಶವನ್ನು ಕಾದಿರಿಸಲಾಗಿದೆ.

ವಿನ್ಯಾಸ ಅನುಮೋದನೆ ಸಂಬಂಧ ಅರ್ಜಿದಾರರಿಂದ ಒಟ್ಟು ಶುಲ್ಕ ರೂ. 3,85,000/– ಮಾತ್ರವನ್ನು ಪಾವತಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ (ಹೊಟೆಲ್ ಮತ್ತು ಕಾಟೇಜ್) ನಿರ್ಮಿಸಲು ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆಯನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಲಾಗಿದೆ.

**ನಿರ್ಣಯ:–** ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 205 ರಲ್ಲಿನ 3.72ಎಕರೆ ವಿಸ್ತೀರ್ಣದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ (ಹೊಟೆಲ್ ಮತ್ತು ಕಾಟೇಜ್) ನಿರ್ಮಿಸಲು ವಿನ್ಯಾಸ ಅನುಮೋದನೆ ನೀಡಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು

**<u>13) ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು:–</u>**

**1) ವಿಷಯಸಂಖ್ಯೆ 1:– ಶ್ರೀ ಎನ್. ಅಪ್ಪುರಾವ್‌ರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್, ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ , ಸರ್ವೆ ನಂಬರ್ 31/3ರ 4.32ಎಕರೆ ಸ.ನ. 35/2ರ 2.52 ಎಕರೆ, 60/1ರ 2.40 ಎಕರೆ ಮತ್ತು ಸ.ನಂ.60/3 ರ 1.11 ಎಕರೆ ಒಟ್ಟು 10.35ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021

ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದೆ. ವಾಣಿಜ್ಯ ವಲಯದಲ್ಲಿ ವಲಯನಿಯಾಮಾವಳಿಗಳನ್ವಯ ವಸತಿ ಉದ್ದೇಶಕ್ಕೆ ಅನುಮತಿ ನೀಡಲು ಅವಕಾಶವಿರುತ್ತದೆ. ಪ್ರಸ್ತಾವಿತ ಜಾಗಕ್ಕೆ 6.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಆದ್ದರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 31/3ರ 4.32ಎಕರೆ ಸ.ನ. 35/2ರ 2.52 ಎಕರೆ, 60/1ರ 2.40 ಎಕರೆ ಮತ್ತು ಸ.ನಂ.60/3 ರ 1.11 ಎಕರೆ ಒಟ್ಟು 10.35ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ವಿಷಯಸಂಖ್ಯೆ 2:– ಶ್ರೀ ಎಸ್.ಸುಬ್ಬಾಯಮ್ಮ ರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 31/1 ರಲ್ಲಿನ 9.86½ ಎಕರೆ ವಿಸ್ತೀರ್ಣದ ಜಮೀನನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/151/ಮೈಅಪ್ರಾ/2011, ಬೆಂಗಳೂರು, ದಿನಾಂಕ:27.07.2011ರಂತೆ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ ಹಾಗೂ ಬದಲಾವಣೆಯನ್ನು ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ. ಅದರಂತೆ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರಲ್ಲಿ ರನ್ವಯ ಪ್ರಸ್ತಾವಿತ ಜಮೀನನ್ನು ವಾಣಿಜ್ಯ ವಲಯಕ್ಕೆ ಕಾಯ್ದಿರಿಸಲಾಗಿದೆ. ವಾಣಿಜ್ಯ ವಲಯದಲ್ಲಿದ್ದರೂ ಸಹ ವಲಯ ನಿಯಾಮಾವಳಿಗಳನ್ವಯ ವಾಣಿಜ್ಯ ಉದ್ದೇಶದ ಜಮೀನಿನಲ್ಲಿ ವಸತಿ ಉದೇಶದ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಅನುಮತಿ ನೀಡಲು ಅವಕಾಶವಿರುತ್ತದೆ. ಪ್ರಸ್ತಾವಿತ ಜಾಗಕ್ಕೆ 6.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಆದ್ದರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 31/1 ರಲ್ಲಿನ 9.86½ ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3) ವಿಷಯಸಂಖ್ಯೆ 3:– ಶ್ರೀ ಎನ್.ಶ್ರೀನಿವಾಸ್‌ರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 27/1ಎ ರಲ್ಲಿ 3.30 ಎಕರೆ, 27/3 ರಲ್ಲಿ 1.50 ಎಕರೆ, 30/1 ರಲ್ಲಿ 2.35 ಎಕರೆ, 30/2 ರಲ್ಲಿ 0.92 ಎಕರೆ 33 ರಲ್ಲಿ 2.33 ಎಕರೆ, 34 ರಲ್ಲಿ 3.57 ಎಕರೆ 63 ರಲ್ಲಿ 3.27 ಎಕರೆ ಮತ್ತು ಸರ್ವೆ ನಂಬರ್ 65/22 ರಲ್ಲಿ 3.25 ಎಕರೆ ಒಟ್ಟು 20.45 ಎಕರೆ ವಿಸ್ತೀರ್ಣದ ಜಮೀನನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021

ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದೆ. ಸದರಿ ಜಾಗವು ಅಭಿವೃದ್ಧಿ ಹೊಂದಿದ ಪ್ರದೇಶಕ್ಕೆ ಹೊಂದಿಕೊಂಡಂತಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ.

ಮಹಾಯೋಜನೆಯಲ್ಲಿ ಪ್ರಸ್ತಾವಿತ ಜಾಗವು ವಾಣಿಜ್ಯ ವಲಯದಲ್ಲಿ ಬರುತ್ತಿದ್ದರೂ ಸಹ ವಲಯ ನಿಯಾಮಾವಳಿಗಳನ್ವಯ ವಸತಿ ಉದ್ದೇಶದ ಅಭಿವೃದ್ಧಿ ಪಡಿಸಲು ಅನುಮತಿ ನೀಡಲು ಅವಕಾಶವಿರುತ್ತದೆ. ಪ್ರಸ್ತಾವಿತ ಜಾಗಕ್ಕೆ 6.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿರುತ್ತದೆ. ಈ ಎಲಾ ಅಂಶಗಳನ್ನು ಪರಿಗಣಿಸಿ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 27/1ಎ ರಲ್ಲಿ 3.30 ಎಕರೆ, 27/3 ರಲ್ಲಿ 1.50 ಎಕರೆ, 30/1 ರಲ್ಲಿ 2.35 ಎಕರೆ, 30/2 ರಲ್ಲಿ 0.92 ಎಕರೆ 33 ರಲ್ಲಿ 2.33 ಎಕರೆ, 34 ರಲ್ಲಿ 3.57 ಎಕರೆ 63 ರಲ್ಲಿ 3.27 ಎಕರೆ ಮತ್ತು ಸರ್ವೆ ನಂಬರ್ 65/22 ರಲ್ಲಿ 3.25 ಎಕರೆ ಒಟ್ಟು 20.45 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**4) ವಿಷಯಸಂಖ್ಯೆ 4:– ಶ್ರೀಮತಿ ವಿಜಯಶ್ರೀರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 22/11 ರಲ್ಲಿನ 0.60 ಎಕರೆ, 22/15 ರಲ್ಲಿ 9.40 ಎಕರೆ, 22/16 ರಲ್ಲಿ 1.05 ಎಕರೆ, 22/18 ರಲ್ಲಿ 0.95 ಎಕರೆ ಮತ್ತು ಸರ್ವೆ ನಂ. 66/2 ರಲ್ಲಿ 3.00 ಎಕರೆ ಒಟ್ಟು 15.00 ಎಕರೆ ವಿಸ್ತೀರ್ಣದ ಜಮೀನನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ/137/ಮೈಅಪ್ರಾ/2011, ಬೆಂಗಳೂರು, ದಿನಾಂಕ:27.07.2011ರಂತೆ ವಾಣಿಜ್ಯ ಉದ್ದೇಶಕ್ಕೆ (ರೆಸಾರ್ಟ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿದೆ ಹಾಗೂ ಬದಲಾವಣೆಯನ್ನು ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ. ಅದರಂತೆ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021 ರನ್ವಯ ಪ್ರಸ್ತಾವಿತ ಜಮೀನನ್ನು ವಾಣಿಜ್ಯ ವಲಯಕ್ಕೆ ಕಾಯ್ದಿರಿಸಲಾಗಿದೆ. ವಾಣಿಜ್ಯ ವಲಯದಲ್ಲಿದ್ದರೂ ಸಹ ವಲಯನಿಯಾಮಾವಳಿಗಳನ್ವಯ ವಸತಿ ಉದ್ದೇಶದ ಅಭಿವೃದ್ಧಿ ಪಡಿಸಲು ಅನುಮತಿ ನೀಡಲು ಅವಕಾಶವಿರುತ್ತದೆ. ಪ್ರಸ್ತಾವಿತ ಜಾಗಕ್ಕೆ ಮಡಿಕೇರಿಯಿಂದ– ಅಬ್ಬಿಫಾಲ್ಸ್‌ಗೆ ಹೋಗುವ 7.50ಮೀ ಮತ್ತು 6.00ಮೀ ಅಗಲದ ಎರಡು ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಆದ್ದರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 22/11 ರಲ್ಲಿನ 0.60 ಎಕರೆ, 22/15 ರಲ್ಲಿ 9.40 ಎಕರೆ, 22/16 ರಲ್ಲಿ 1.05 ಎಕರೆ, 22/18 ರಲ್ಲಿ 0.95 ಎಕರೆ ಮತ್ತು ಸರ್ವೆ ನಂ. 66/2 ರಲ್ಲಿ 3.00 ಎಕರೆ ಒಟ್ಟು 15.00 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5) ವಿಷಯಸಂಖ್ಯೆ 5:– ಶ್ರೀಮತಿ ಗದ್ದೆ ಶ್ರಾವಣಿ ರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 66/6ರಲ್ಲಿನ 3.00ಎಕರೆ ವಿಸ್ತೀರ್ಣದ ಜಮೀನನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಾಗವು ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 66/4 ರಿಂದ ವಿಂಗಡಿಸಿರುವ ಜಮೀನಾಗಿದ್ದು, ಹೊಸ ಸರ್ವೆ ನಂಬರ್ 66/6 ಆಗಿರುತ್ತದೆ. ಈ ಜಮೀನು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದೆ.

ಮಹಾಯೋಜನೆಯಲ್ಲಿ ಪ್ರಸ್ತಾವಿತ ಜಾಗವು ವಾಣಿಜ್ಯ ವಲಯದಲ್ಲಿ ಬರುತ್ತಿದ್ದರೂ ಸಹ ವಲಯ ನಿಯಾಮಾವಳಿಗಳನ್ವಯ ವಸತಿ ಉದ್ದೇಶದ ಅಭಿವೃದ್ಧಿ ಪಡಿಸಲು ಅನುಮತಿ ನೀಡಲು ಅವಕಾಶವಿರುತ್ತದೆ ಹಾಗೂ ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಪ್ರಸ್ತಾವಿತ ಜಾಗಕ್ಕೆ 6.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ತಾಲ್ಲೂಕು, ಕೆ.ನಿಡುಗಣೆ ಗ್ರಾಮದ, ಸರ್ವೆ ನಂಬರ್ 66/6ರಲ್ಲಿನ 3.00ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**6)ವಿಷಯಸಂಖ್ಯೆ 6:– ರಾಜ್ಯದಲ್ಲಿನ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾರ್ಯಚಟುವಟಿಕೆಗಳನ್ನು ಗಣಕೀಕರಣಗೊಳಿಸುವ ಹಾಗೂ ಪ್ರತ್ಯೇಕ ವೆಬ್‌ಸೈಟ್‌ಗಳನ್ನು ರಚಿಸುವ ಬಗ್ಗೆ ಕರ್ನಾಟಕ ಮುನ್ಸಿಪಲ್ ಡೇಟಾ ಸೊಸೈಟಿಗೆ ವಂತಿಕೆ ಪಾವತಿಸುವ ಬಗ್ಗೆ.**

**ಟಿಪ್ಪಣಿ:–** ಕರ್ನಾಟಕ ಮುನ್ಸಿಪಲ್ ಡಾಟಾ ಸೊಸೈಟಿಯು 2007–08ನೇ ಸಾಲಿನಿಂದ ಕಾರ್ಯಾರಂಭಗೊಂಡಿದ್ದು, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಆಡಳಿತ ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ಮುನ್ಸಿಪಲ್ ಡೇಟಾ ಸೊಸೈಟಿಯ ಮೂಲಕ ಗಣಕೀಕರಣಗೊಳಿಸಿರುವ ಬಾಬ್ತು ಸದಸ್ಯತ್ವ ಶುಲ್ಕ ರೂ.2,00,000/– ಮತ್ತು ವಾರ್ಷಿಕ ಶುಲ್ಕ ರೂ.2,80,000/– ಒಟ್ಟು 4,80,000/– ಮಾತ್ರವನ್ನು ಕಾರ್ಯದರ್ಶಿಗಳು, ಕರ್ನಾಟಕ ಮುನ್ಸಿಪಲ್ ಡಾಟಾ ಸೊಸೈಟಿ, ಬೆಂಗಳೂರುರವರ ಹೆಸರಿಗೆ ಡಿ.ಡಿ. ಮೂಲಕ ಪಾವತಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಮತ್ತು ಪದನಿಮಿತ್ತ ಕಾರ್ಯದರ್ಶಿಗಳು ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರುರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಲಾಗಿದೆ.

**ನಿರ್ಣಯ:–**ಪ್ರಾಧಿಕಾರದ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸದಸ್ಯತ್ವ ಶುಲ್ಕ ರೂ.2,00,000/– ಹಣವನ್ನು ಪಾವತಿಸಲು ಕ್ರಮ ಕೈಗೊಳ್ಳಲು ಆಯುಕ್ತರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**7)ವಿಷಯಸಂಖ್ಯೆ 7:–ಅಧ್ಯಕ್ಷರು, ಮಜ್ಜಿದ್ ಹಲೀಮ್, ಮಡಿಕೇರಿರವರು ದಿನಾಂಕ:13.062016ರಲ್ಲಿ ಅರ್ಜಿ ಸಲ್ಲಿಸಿ ನಗರಸಭಾ ಬ್ಲಾಕ್ ನಂಬರ್–7, ಸರ್ವೆ ನಂಬರ್ 33/7ರಲ್ಲಿ ಈಗಾಗಲೇ ಹಾಸ್ಟೆಲ್ ಕಟ್ಟಡವನ್ನು ನಿರ್ಮಿಸಲು ಅನುಮೋದನೆ ಪಡೆದುಕೊಂಡಿರುವ ಕಟ್ಟಡದಲ್ಲಿ ಧ್ವನಿವರ್ಧಕದ ಮೂಲಕ ನಮಾಜ್ ಮಾಡಲು ಅನುಮತಿಯನ್ನು ನೀಡಲು ಕೋರಿರುವ ಬಗ್ಗೆ.**

**ನಿರ್ಣಯ:–**ಈ ಮೇಲಿನಂತೆ ಅರ್ಜಿದಾರರು ನಮಾಜ್ ಮಾಡಲು ಅವಕಾಶ ನೀಡಬೇಕೆಂದು ಕೋರಿರುವ ವಿಷಯವನ್ನು ಮಾನ್ಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ವಸತಿ ಬಡಾವಣೆಯಲ್ಲಿ ಮಸೀದಿ ಮತ್ತು ನಮಾಜ್ ಮಾಡಲು ಪ್ರಾಧಿಕಾರದ ವಕೀಲರಿಂದ ಕಾನೂನು ಸಲಹೆಯನ್ನು ಪಡೆದುಕೊಂಡು ಅದರಂತೆ ಕ್ರಮ ವಹಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**8)ವಿಷಯಸಂಖ್ಯೆ 8:– ಶ್ರೀ ಮೋಹನ್ ಕುಮಾರ್‌ರವರು ಮಡಿಕೇರಿ ನಗರಸಭಾ ಬ್ಲಾಕ್ ನಂಬರ್ 11, ಸರ್ವೆ ನಂಬರ್ 53/1ರಲ್ಲಿನ ನಿವೇಶನದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಲು ಅನುಮತಿ ಪಡೆದುಕೊಂಡಿರುವ ಪ್ರಸ್ತಾವನೆಗೆ ಮಾರ್ಪಡಿತ ನಕ್ಷೆಯನ್ನು ಅನುಮೋದಿಸಿಕೊಡಲು ಕೋರಿ ಪೌರಾಯುಕ್ತರು, ನಗರಸಭೆ, ಮಡಿಕೇರಿಯಿಂದ ಸ್ವೀಕರಿಸಿರುವ ಕಡತದ ಬಗ್ಗೆ.**

**ನಿರ್ಣಯ:–**ಸದರಿ ನಿವೇಶನವು 225.82ಚ.ಮೀ ವಿಸ್ತೀರ್ಣದ ನಿವೇಶನವಾಗಿದ್ದು, ಮಡಿಕೇರಿ ನಗರದ ಅನುಮೋದಿತ ವಲಯನಿಯಾಮಾವಳಿಗಳನ್ವಯ 240.00ಚ.ಮೀ ಅಳತೆಯವರೆಗೆ ನೆಲ ಮತ್ತು ಒಂದನೇ ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು ಮಾತ್ರ ಅವಕಾಶವಿದ್ದು, ಅರ್ಜಿದಾರರು ಎರಡನೇ ಹಂತದ ಹೆಚ್ಚುವರಿ ಕಟ್ಟಡವನ್ನು ನಿರ್ಮಿಸಿರುವುದು ಸ್ಥಳದಲ್ಲಿ ಕಂಡುಬಂದಿರುತ್ತದೆ. ಆದರೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರ ವಲಯನಿಯಾಮಾವಳಿಗಳ ಪ್ರಕಾರ 2ನೇ ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು 240.00ಚ.ಮೀ ಗಿಂತ ಹೆಚ್ಚಿನ ನಿವೇಶನದ ವಿಸ್ತೀರ್ಣ ಅವಶ್ಯಕತೆ ಇರುತ್ತದೆ. ಆದರೆ ಅರ್ಜಿದಾರರ ನಿವೇಶನಕ್ಕೆ ಈ ವಿಸ್ತೀರ್ಣ ಸರಿದೂಗಲು ಸುಮಾರು 15.00ಚ.ಮೀ ವಿಸ್ತೀರ್ಣ ಕಡಿಮೆ ಇರುವುದಾಗಿ ತಿಳಿಸಿರುತ್ತಾರೆ. ಆದರೆ ಈಗಾಗಲೇ ಭೂ ಮಾಲೀಕರಿಂದ ಹೆಚ್ಚುವರಿಯಾಗಿ 1 ಸೆಂಟು (40.48ಚ.ಮೀ) ಅಳತೆಯ ನಿವೇಶನವನ್ನು ಒಪ್ಪಂದ ಪತ್ರದಲ್ಲಿ ಖರೀದಿಸಲು ಒಡಂಬಡಿಕೆ ಮಾಡಿಕೊಂಡಿರುತ್ತೇನೆ ಆದ್ದರಿಂದ ಹೆಚ್ಚುವರಿಯಾಗಿ ನಿರ್ಮಿಸಿರುವ ಕಟ್ಟಡಕ್ಕೆ ಅನುಮತಿ ನೀಡಬೇಕೆಂದು ಅರ್ಜಿದಾರರು ಕೋರಿರುವುದಾಗಿ ಸಭೆಯಲ್ಲಿ ಆಯುಕ್ತರು ಮಾಹಿತಿಯನ್ನು ನೀಡಿದರು.

ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಒಪ್ಪಂದದ ಒಡಂಬಡಿಕೆ ಪತ್ರವನ್ನು ಶೀಘ್ರದಲ್ಲಿ ನೋಂದಣಿ ಮಾಡಿಸಿಕೊಳ್ಳುವ ಷರತ್ತುವಿಧಿಸಿ ಅನುಮತಿ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸಹಿ/–**
**(ಶ್ರೀಮತಿ ಸುರಯ್ಯಾ ಅಬ್ರಾರ್)**
**ಅಧ್ಯಕ್ಷರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**
**(ಶ್ರೀ ಬಿ.ಪಿ.ರಾಜಶೇಖರ್)**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**